GULBARGA UNIVERSITY
"Jnana Ganga", GULBARGA - 585 106,
Karnataka, India.
☎ 08472-263202
Fax 08472-263206
E-Mail: root@gulbuni.kar.nic.in
Grams: UNIGUL

ಕ್ರ.ಸಂ. ಗುವಿಗು:ವಿಮವಿ:ಸಂಲಗ್ನತೆ/2014-15/ 7382 ದಿನಾಂಕ 26-12-2014

## ಅಧಿಸೂಚನೆ

ವಿಷಯ: 2014-15 ನೇ ಶೈಕ್ಷಣಿಕ ಸಾಲಿಗೆ ಬೀದರ್‌ನ ಕರ್ನಾಟಕ ಶಿಕ್ಷಣ ಸಂಸ್ಥೆಯವರು ಬೀದರ್‌ನಲ್ಲಿ ಹೊಸದಾಗಿ ವಿದ್ಯಾವಿಕಾಸ ಪ್ರಥಮ ದರ್ಜೆ ಕಾಲೇಜಿಗೆ ಪ್ರಾರಂಭಿಸಲಿರುವ ಬಿ.ಎ. ಮತ್ತು ಬಿ.ಎಸ್ಸಿ, ಕೋರ್ಸಗಳಿಗೆ ಸಂಯೋಜನೆ ನೀಡುವ ಬಗ್ಗೆ.

ಉಲ್ಲೇಖ: 1. ಸ್ಥಾನಿಕ ವಿಚಾರಣಾ ಸಮಿತಿ ವರದಿ ದಿನಾಂಕ: 13.03.2014
2. ವಿದ್ಯಾವಿಷಯಕ ಪರಿಷತ್ ಸಭೆಯ ಗೊತ್ತುವಳಿ ಸಂಖ್ಯೆ 01 ದಿನಾಂಕ 24.03.2014.
3. ಸಿಂಡಿಕೇಟ ಸಭೆಯ ಗೊತ್ತುವಳಿ ಸಂಖ್ಯೆ 01 ದಿನಾಂಕ 24.03.2014.
4. ಸರಕಾರದ ಪತ್ರ ಸಂಖ್ಯೆ ಇಡಿ 91 ಯುಜಿವಿ 2014 ದಿನಾಂಕ 03.07.2014.
5. ಕುಲಪತಿಗಳ ಆದೇಶ ದಿನಾಂಕ: 11.12.2014.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ, 59ನೇ ಪ್ರಕರಣದ (11)ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರದಂತೆ 2014-15ನೇ ಶೈಕ್ಷಣಿಕ ಸಾಲಿನಿಂದ ಬೀದರ್‌ನ ಕರ್ನಾಟಕ ಶಿಕ್ಷಣ ಸಂಸ್ಥೆಯವರು ಬೀದರ್‌ನಲ್ಲಿ ಹೊಸದಾಗಿ ವಿದ್ಯಾವಿಕಾಸ ಪ್ರಥಮ ದರ್ಜೆ ಕಾಲೇಜಿಗೆ ಪ್ರಾರಂಭಿಸಲಿರುವ ಬಿ.ಎ. ಮತ್ತು ಬಿ.ಎಸ್ಸಿ, ಕೋರ್ಸಗಳಿಗೆ ಅದರ ಮುಂದೆ ನಮೂದಿಸಿದ ವಿಷಯ ಸಮೂಹ ಮತ್ತು ವಿದ್ಯಾರ್ಥಿ ಪ್ರಮಾಣದೊಂದಿಗೆ ಒಂದು ವರ್ಷದ ಕಾಲಾವಧಿವರೆಗೆ ಬೋಧಿಸುವದಕ್ಕಾಗಿ ಈ ಕೆಳಕಾಣಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸಬೇಕೆಂಬ ಕರಾರಿನೊಂದಿಗೆ ಮಂಜೂರಾತಿ ನೀಡಲಾಗಿದೆ.

| ಕೋರ್ಸ | ವಿಷಯಗಳು | ವಿದ್ಯಾರ್ಥಿಗಳ ನಿಗದಿತ ಪ್ರವೇಶ ಸಂಖ್ಯೆ |
|---|---|---|
| ಬಿ.ಎ<br>I ಮತ್ತು IIನೇ, ಸೆಮೆಸ್ಟರ | ಭಾಗ-1 ಕನ್ನಡ, ಇಂಗ್ಲೀಷ, ಹಿಂದಿ, ಉರ್ದು<br>ಭಾಗ-2 ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣ | 60 (ಅರವತ್ತು ಮಾತ್ರ) |
| ಬಿ.ಎಸ್ಸಿ<br>I ಮತ್ತು IIನೇ, ಸೆಮೆಸ್ಟರ | ಭಾಗ-1 ಕನ್ನಡ, ಇಂಗ್ಲೀಷ, ಹಿಂದಿ, ಉರ್ದು<br>ಭಾಗ-2 ರಸಾಯನಶಾಸ್ತ್ರ, ಭೌತಶಾಸ್ತ್ರ, ಸಸ್ಯಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ | 40 (ನಲವತ್ತು ಮಾತ್ರ) |

ಸ್ಥಾನಿಕ ವಿಚಾರಣಾ ಸಮಿತಿಯ ಷರತ್ತುಗಳು:

**B.A. Course**

1. Full Time, qualified Principal and Staff to be appointed.
2. Reservation to be followed in recruitment of staff.
3. Books worth Rs. 50,000/- to be purchased.
4. Proper sanitation facilities to be provided.
5. Stability fund as per University rules to be deposited.
6. A minimum salary of Rs. 10,000/- pm to be paid to the staff.

**B.Sc. Course**

1. Qualified full time, Principal and Staff to be appointed.
2. Reservation to be followed in recruitment of staff.
3. A minimum salary of Rs. 10,000/- pm to be paid to the staff.
4. Books worth Rs. 50,000/- to be purchased.
5. Lab equipment worth Rs. 1,00,000/- to be purchased.
6. Stability fund as per University rules to be deposited.
7. Proper sanitation facilities to be provided.

1. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿನ ಮತ್ತು ಬಿ.ಎಸ್ಸಿ. ಕೋರ್ಸಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋಸೆಂದು ಪರಿಗಣಿಸತಕ್ಕದ್ದು.
2. ಮೇಲ್ಕಂಡ ಕಾಲೇಜು ಗುಲಬರ್ಗಾ ವಿಶ್ವವಿದ್ಯಾಲಯದ. ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
3. ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.
4. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5. ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
6. ಕಾಲೇಜು/ಆಡಳಿತ ಮಂಡಳಿಯು ಶೇ.50ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು, ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯ ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲುಮಾಡತಕ್ಕದ್ದು. ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ / ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.
7. ದಿನಾಂಕ 13.08.1997 ರಂದು ವಿಶಾಖ V/S ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ / ವಿದ್ಯಾರ್ಥಿಯು ಗಲಭೆಯನ್ನು ಉಂಟುಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (Cognizable offfence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ / ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ / ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸತಕ್ಕದ್ದು. ಮುಂದುವರಿದು, ಕಾಲೇಜು / ಆಡಳಿತ ಮಂಡಳಿಯ ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.
8. ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು / ಆಡಳಿತ ಮಂಡಳಿ ವಿದ್ಯಾರ್ಥಿ / ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.
9. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದಲ್ಲ.
10. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದ್ದಲ್ಲಿ, ಅದನ್ನುವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ, ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ ಸೆಮಿಸ್ಟರ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.
11. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
12. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
13. ಆಡಳಿತ ವ್ಯವಹಾರದಲ್ಲ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.

<u>ವಿಶೇಷ ಸೂಚನೆ:</u> ಮುಂದಿನ ಶೈಕ್ಷಣಿಕ ಸಾಲಿಗೆ ಕಡ್ಡಾಯವಾಗಿ ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಅರ್ಜಿ ಸಲ್ಲಿಸಿ ಮುಂದುವರಿಕೆ ಹಾಗೂ ವಿಸ್ತರಣೆ ಸಂಲಗ್ನತೆ ಪಡೆಯಬೇಕೆಂದು ಸೂಚಿಸಲಾಗಿದೆ.

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಗೆ,

ಪ್ರಾಂಶುಪಾಲರು,
ಕರ್ನಾಟಕ ಶಿಕ್ಷಣ ಸಂಸ್ಥೆ,
ವಿದ್ಯಾವಿಕಾಸ ಪ್ರಥಮ ದರ್ಜೆ ಕಾಲೇಜು,
ಗುನಳ್ಳಿ ರಸ್ತೆ,
ಬೀದರ್ – 585 403.

<u>ಪ್ರತಿಗಳು:</u>
1. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರದ ಸಚಿವಾಲಯ, ಬೆಂಗಳೂರು.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಚೇರಿ ಕಾಲೇಜು ಶಿಕ್ಷಣ ಇಲಾಖೆ, ಗುಲಬರ್ಗಾ.
4. ಕುಲಸಚಿವರು (ಮೌಲ್ಯಮಾಪನ) ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ
6. ವಿಷಯ ನಿರ್ವಾಹಕರು, ಅರ್ಹತಾ ಪತ್ರ ಶಾಖೆ ವಿದ್ಯಾಮಂಡಲ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ